There is no provision to transport the dead body in the Ambulance Van from this Hospital to Hospet.

"In continuation of the report filed already about the subject noted above I want to inform you that.—

1. Adequate stock of formalin was available in the Hospita and also in the mortuary on 14th November, 1990.

2. The physician had opined that as the relatives told him that they have planned to cremate the body on 14th itself the formalin treatment is not required, as the body will not deteriorate, since the death is duea to natural causes. The death due to unnatural causes like poisoning, accident etc., will deteriorate early, Also the formalin treated body will emit strong pungent and unpleasant fumes around.

3. Preservation is done in the Victoria Hospital mortuary with the help of the Anatomy department of Bangalore Medical College.

4. However, the usual formality of applying the formalin to the body at the time of handing over was done.

5. Resident Medical Officer who was available all the time says that he told the attendant that the formalin is available in the Hospital.

ಆಲ್ಲಿ ಫಾರ್‌ಮಾಲಿನ್ ಇರಲಿಲ್ಲವೆಂದು ತಮಗೆ ತಪ್ಪು ಮಾಹಿತಿಯನ್ನು ಯಾರೋ ಕೊಟ್ಟಿದ್ದಾರೆ.

ಶ್ರೀ ಎಸ್. ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಅವರ ಹೆಂಡತಿಗೆ ಏನೇನೂ ಗೊತ್ತಿಲ್ಲ. ಅವರಂ ವಿಧಾನಸೌಧ ನೋಡಿಲ್ಲ. ಅವರಿಗೆ ಶಾಸಕರ ಭವನ ಗೊತ್ತಿಲ್ಲ. ಡಿ. ಬಿ ಚಂದ್ರೇಗೌಡರು ಯಾರೆಂದು ಗೊತ್ತಿಲ್ಲ. ಆಲ್ಲಿನ ಡಾಕ್ಟರುಗಳಿಗೆ ಏಂತರ್ತು ಸಿಬ್ಬಂದಿಗೆ ಹಣವನ್ನು ಯಾವ ಪ್ರಕಾರ ಕಟ್ಟಬೇಕೆನ್ನುವುದು ಗೊತ್ತಿಲ್ಲ. ಒಬ್ಬ ಶಾಸಕರು ಅದನ್ನು ಕಟ್ಟುವ ಪರಿಸ್ಥಿತಿ ಬಂತು.

ಶ್ರೀ ಟಿ. ಎಂ. ಪಂಜುನಾಥ್.—ಮಾನ್ಯ ಅಧ್ಯಕ್ಷರೆ, ಆಲ್ಲಿ ಏನಾಗಿದೆ ಎಂಬುದನ್ನು ನನ್ನ ತಿಳಿದಮಟ್ಟಿಗೆ ಹೇಳುತ್ತೇನೆ. ನನಗೆ ತಿಳಿದಂತೆ ಗಂಜ್ಞಾಲಹನುಮಂತಪ್ಪನವರು ಆಸ್ಪತ್ರೆಯಲ್ಲಿ ಆ ಆಸ್ಪತ್ರೆಯಲ್ಲಿ ಶ್ಲೇಷ್ಮ ಅಂದರೆ ಕಫ ತೆಗೆಯುವ ಯಂತ್ರ ಸರಿಯಾಗಿ ವರ್ಕ್ ಮಾಡಲಿಲ್ಲ ಇದು ನನಗೆ ಗೊತ್ತಿರತಕ್ಕ ವಿಚಾರ, ಕೆಲವು ಡಾಕ್ಟರುಗಳು ಹೇಳಿರತಕ್ಕ ವಿಚಾರ. ಅವರ ಆನಾರೋಗ್ಯಕ್ಕೆ ಸರಿಯಾದ ಟ್ರೀಟ್‌ಮೆಂಟ್ ಇಲ್ಲದೆ ಕಾರಣ ಅವರು ಸಾಯಲಿಲಂ ಕಾರಣವೆಂದು ನನಗೆ ತಿಳಿದಿದೆ. ಅದನ್ನು ಆರೋಗ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ತರಂತ್ತಿದ್ದೇನೆ.

ಶ್ರೀಮಂತಿ ಕೆ. ಎಸ್. ನಾಗರತ್ನಮ್ಮ.—ಅದನ್ನು ವಿಚಾರಿಸುತ್ತೇನೆ.

ಗೈರು ಹಾಜರಿಗೆ ಅನುಮತಿ ಕೋರಿಕೆ

ಅಧ್ಯಕ್ಷರು.—ವಿಧಾನಸಭಾ ಸದಸ್ಯರಾದ ಪ್ರಭಾಕರ್ ಎಸ್. ರಾಣಿಯವರು ಆನಾರೋಗ್ಯದ ಸ್ಥಿತಿಯಿಂದಾಗಿ ದಿನಾಂಕ ೨೦-೧೧-೯೦ ರಿಂದ ೨೭-೧೧-೯೦ರವರೆಗೆ ಸದನಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲವೆಂದು ಪತ್ರ ಬರೆದಿದ್ದಾರೆ.

"ಶ್ರೀ ಪ್ರಭಾಕರ್ ಎಸ್. ರಾಣಿಯವರ ಮೇಲೆ ಸೂಚಿಸಿದ ಅವಧಿಯಲ್ಲಿ ಸದನಕ್ಕೆ ಗೈರುಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.—ಶ್ರೀ ಪ್ರಭಾಕರ್ ಎಸ್. ರಾಣೆಯವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ ಈಗ ಶ್ರೀ ವಾಲಿಕಯ್ಯಗುತ್ತಿದಾರ್—ಗೈರು ಹಾಜರಿ

ನಿಯಮ ೩೩ಳಿರ ವೇರೆಗೆ

ಕುಂದಗೋಳ ಕ್ಷೇತ್ರಕ್ಕೆ ಸೇರಿದ ಸೇರೆವಾಡ–ಸವಣೂರು ರಸ್ತೆಯ ದುರಸ್ತಿ ಬಗ್ಗೆ

ಶ್ರೀ ಗೋವಿಂದಪ್ಪ ಏ. ಜುಟ್ಟಲ್ (ಕುಂದಗೋಳ್).—ಮಾನ್ಯ ಅಧ್ಯಕ್ಷರೇ, ಕುಂದಗೋಳ ಕ್ಷೇತ್ರಕ್ಕೆ ಸೇರಿದ ಸೇರೇವಾಡ–ಸವಣೂರು ರಸ್ತೆ ರಾಷ್ಟ್ರೀಯ ಹೆದ್ದಾರಿಯ ಸಮಾನಂತರ ಪ್ರಮುಖ ರಸ್ತೆಯಾಗಿದ್ದು, ಇದು ಸಂಪೂರ್ಣವಾಗಿ ಹಾಳಾಗಿದೆ. ಕಳೆದ ಹತ್ತು–ಹದಿನೈದು ವರ್ಷಗಳಿಂದ ಕೂಡ ಈ ರಸ್ತೆಯನ್ನು ರಿಪೇರಿ ಮಾಡಿಲ್ಲ. ಇದರಿಂದ ಈ ರಸ್ತೆಯ ಬಡಿಯಂ ಸುಮಾರು ೨೦ ಗ್ರಾಮಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಇದರ ಕುಲಗೆಟ್ಟ ಪರಿಸ್ಥಿತಿಯಿಂದ ಸಂಚಾರಕ್ಕೆ ಆಯೋಗ್ಯವಾಗಿರುವ ಈ ರಸ್ತೆಯಲ್ಲಿ ವಾಹನಗಳು ನಿರಂತರ ಅಪಘಾತಕ್ಕೀಡಾಗುತ್ತಿರುವುದು ಪ್ರತಿನಿತ್ಯ ನೋಡುವ ದೃಶ್ಯವಾಗಿದೆ. ಧಾರವಾಡ ಜಿಲ್ಲಾ ಪರಿಷತ್ತು ಈ ಬಗ್ಗೆ ಒಂದು ನಿರ್ಣಯ ಮಾಡಿ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಒಪ್ಪಿಸಬೇಕೆಂದು ಅದನ್ನು ಸರ್ಕಾರಕ್ಕೆ ಕಳಿಸಿದೆ. ಆದ್ದರಿಂದ ಈ ರಸ್ತೆಯನ್ನು ಕೂಡಲೇ ರಿಪೇರಿ ಮಾಡಿ ಸಂಚಾರಯೋಗ್ಯ ರಸ್ತೆಯನ್ನಾಗಿ ಮಾಡಬೇಕೆಂದು ನಾನು ಈ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಸರ್ಕಾರದ ಹೇಳಿಕೆಯನ್ನು ನೀಡುತ್ತೇನೆ.

ಸೇರವಾಡ–ಸವಣೂರು ರಸ್ತೆಯು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆಯು ಧಾರವಾಡ ಜಿಲ್ಲಾ ಪರಿಷತ್‌ಗೆ ವ್ಯಾಪ್ತಿಗೆ ಸೇರಿದ್ದು ಇದರ ದುರಸ್ತಿ ಕಾರ್ಯವನ್ನು ಜಿಲ್ಲಾ ಪರಿಷತ್ತಿನವರಿಂದ ನಡೆಸಬೇಕಾಗಿರುತ್ತದೆ. ಸದರಿ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೇರಿಸಿ, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಣೆ ಮಾಡುವಂತೆ ಜಿಲ್ಲಾ ಪರಿಷತ್ತಿನವರಿಂದ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆಗಳನ್ನು ಸ್ವೀಕರಿಸಿದ್ದು, ಹೈ ಪವರ್ ಕಮಿಟಿ ಮತ್ತು ಹಣಕಾಸು ಇಲಾಖೆಯವರೊಡನೆ ತೀವ್ರವಾಗಿ ವ್ಯವಹರಿಸಲಾಗಿರುತ್ತದೆ. ಹೈ ಪವರ್ ಕಮಿಟಿಯು ಅಂಗೀಕಾರ ಬಂದ ತಕ್ಷಣ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಣೆ ಕಾರ್ಯವನ್ನು ಮಾಡಲಾಗುತ್ತದೆ.

(ಮಾನ್ಯ ಸದಸ್ಯರಾದ ಶ್ರೀ ಯು. ಕೆ. ಶಾಮಣ್ಣ ಅವರು ಸಭೆಯಲ್ಲಿ ಹಾಜರಿರಲಿಲ್ಲ)

೨) ರಸ್ತೆಗಳಲ್ಲಿ ಒಕ್ಕಣಿ ಮಾಡುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಆಗುತ್ತಿರುವ ಬಗ್ಗೆ.

ಶ್ರೀ ಜಿ. ರಾಜಗೌಡ (ಹನೂರು),–ಮಾನ್ಯ ಅಧ್ಯಕ್ಷರೇ, ರಾಜ್ಯದ ಅನೇಕ ಪ್ರಾಂತೀಯ ಹೆದ್ದಾರಿಗಳಲ್ಲಿಯೂ ಜಿಲ್ಲಾ ಪರಿಷತ್ ರಸ್ತೆಯಲ್ಲಿಯೂ ಸಹಾ ಅಲ್ಲಲ್ಲಿ ರಸ್ತೆ ತಡೆಗಳನ್ನು ಯದ್ವಾ ತದ್ವಾ ನಿರ್ಮಾಣ ಮಾಡಿ ವಾಹನಗಳ ಸಂಚಾರವನ್ನು ಸ್ಥಗಿತ ಮಾಡಿರುತ್ತಾರೆ ಎಲ್ಲೆಲ್ಲಿ ಇಂತಹ ರಸ್ತೆಗಳ ಉಬ್ಬು ಇವೆ ಎಂಬುದು ವಾಹನ ಚಾಲಕರಿಗೆ ತಿಳಿದಿರುವುದಿಲ್ಲ. ಇದರಿಂದ ಅಪಘಾತಗಳು ನಡೆಯುತ್ತಿವೆ. ಕೆಲವು ಸೇತುವೆಗಳ ಮೇಲೂ ಇಂಥ ರಸ್ತೆ ತಡೆಗಳನ್ನು ನಿರ್ಮಿಸಿದಾಗ, ದುರ್ಬಲ ಸೇತುವೆಗಳ ಮೇಲೆ ಹೆಚ್ಚಿನ ಭಾರ ಬಿದ್ದಂತಾಗುತ್ತದೆ. ಎಲ್ಲಾ ರೀತಿಯಿಂದಲೂ ಈ ರಸ್ತೆ ಅಡೆತಡೆಗಳು ಸಂಚಾರಕ್ಕೆ ತೊಂದರೆಯನ್ನುಂಟು ಮಾಡುವುದರಿಂದ, ಕೂಡಲೇ ಇವುಗಳೆಲ್ಲವನ್ನೂ ತೆಗೆಯಿಸಿ, ವಾಹನ ಸಂಚಾರಕ್ಕೆ ಯಾವುದೇ ರೀತಿಯ ಅಡೆತಡೆ ಇಲ್ಲದಂತೆ ಮಾಡಿಕೊಡಬೇಕೆಂದೂ, ರಸ್ತೆಯಲ್ಲಿ ರಾಗಿ ಮೊದಲಾದ ದವಸಧಾನ್ಯಗಳ ಒಕ್ಕಣಿ ಮಾಡಲು ಯಾರಿಗೂ ಅವಕಾಶ ಕೊಡಬಾರದೆಂದೂ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಉತ್ತರ ಈಗ ಇಲ್ಲ. ಪ್ರತ್ಯೇಕವಾಗಿ ಒದಗಿಸಲಾಗುವುದು.

ಈಗ ಶ್ರೀ ಪಿ.ಸಿ. ಸಿದ್ದನಗೌಡರ್ ಗೈರುಹಾಜರಿ.